**ಅಸಾಃ 1**

<u>ದಿನಾಂಕಃ **15/07/2024** ರಂದು ಅಸಾಃ **1** ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ. ವಿ. ಜಿ. ವಕೀಲರಿಂದಃ</u>

ಆರೋಪಿಗಳು ನಮ್ಮ ಊರಿನವರು ಹಾಗೂ ಚಿರಪರಿಚಿತರು ಎಂದರೆ ಸರಿ. ಅವರು ಎಲ್ಲರೂ ಕೂಲಿ ಕೆಲಸ ಮಾಡುತ್ತಾರೆ. 2 ನೇ ಆರೋಪಿ ಚಾಲಕ ವೃತ್ತಿ ಮಾಡುತ್ತಾರೆ ಎಂದರೆ ಸರಿ. ಅವರಿಗೆ ಸ್ವಂತ ಗಾಡಿ ಎಂದರೆ ಸರಿ. ಅವರ ಗಾಡಿಯಲ್ಲಿ ಚಾಸಾ-2 ರಿಂದ 7 ರವರು ಕುಳಿತುಕೊಂಡು ಹೋಗುತ್ತಿದ್ದಾಗ, ವಾಹನ ಮಗುಚಿ ಅಪಘಾತವಾಗಿದೆ ಎಂದರೆ ಸರಿ. ದೂರು ಕೊಟ್ಟ ದಿನಾಂಕವನ್ನು ಹೇಳಲು ಆಗುವುದಿಲ್ಲ ಎಂದರೆ ಸರಿ. ಘಟನೆ ನಡೆದಾಗ ನಾನು ಸ್ಥಳದಲ್ಲಿರಲಿಲ್ಲ, ಮನೆಯಲ್ಲಿದೆ ಎಂದರೆ ಸರಿ. ಘಟನೆ ನಡೆದ ಸಮಯ ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಗಲಾಟೆ ಬಗ್ಗೆ ಊರಿನವರು ಹೇಳಿರುತ್ತಾರೆ. ಯಾರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಯಾರ ಯಾರ ನಡುವೆ ಗಲಾಟೆಯಾಗಿದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ.

2. ನಾನು ಗಲಾಟೆ ಸ್ಥಳಕ್ಕೆ ನಾನು ಹೋದಾಗ ರಾತ್ರಿ 7.00 ಗಂಟೆಯಾಗಿರುತ್ತದೆ. ಆಗ ಯಾರೆಲ್ಲಾ ಸ್ಥಳದಲ್ಲಿದ್ದರು ಎಂದು ಅವರ ಹೆಸರನ್ನು ಹೇಳಲು ಆಗುವುದಿಲ್ಲ ಎಂದರೆ ಸರಿ. ಚಾಸಾ-2 ರಿಂದ 7 ರವರು ವಾಹನ ಮಗುಚಿ ಬಿದ್ದು ಏಟಾಗಿದ್ದರಿಂದ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿ. ಏಟಾದ ದಿನವೆ ನಾವೆಲ್ಲಾ ಚಿಕಿತ್ಸೆ ಪಡೆದಿದ್ದೇವೆ ಎಂದರೆ ಸರಿ. ನಾನು ಆಸ್ಪತ್ರೆಗೆ ಹೋದಾಗ ರಾತ್ರಿ 8-8.30 ಆಗಿರುತ್ತದೆ. ನಿಪಿ-1 ರಲ್ಲಿ ದಿನಾಂಕ ನಮೂದು ಮಾಡಿಲ್ಲ ಎಂದರೆ ಸರಿ. ಈಗಲೂ ಕೂಡ ಅದು ಖಾಲಿ ಇದೆ ಎಂದರೆ ಸರಿ. ಅದರಲ್ಲಿ ಏನು

ಬರೆದಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ನಾನು ಅವಿದ್ಯಾವಂತೆ ಎಂದು ನುಡಿಯುತ್ತಾರೆ.

3. ಎಲ್ಲಾ ಆರೋಪಿಗಳು ನನ್ನ ಪಕ್ಕೆಗೆ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ನಾನು ನ್ಯಾಯಾಲಯದಲ್ಲಿ ಹೇಳಿದ್ದು, ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. 1 ಮತ್ತು 2 ನೇ ಆರೋಪಿ ನನಗೆ ದೊಣ್ಣೆಯಿಂದ ಹೊಡೆದಿರುವ ವಿಚಾರವನ್ನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಮೋಹನ ನನ್ನ ಮಗನಿಗೆ ಬೆನ್ನಿಗೆ ದೊಣ್ಣೆಯಿಂದ ಹೊಡೆದಿರುವ ವಿಚಾರವನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಮೋಹನ ನನ್ನ ಮಗ ಸುನೀಲನ ಕಪಾಳಕ್ಕೆ ಹೊಡೆದಿರುವ ವಿಚಾರವನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ಅನಿಲ್, ದೇವರಾಜನಿಗೆ ದೊಣ್ಣೆಯಿಂದ ಹೊಡೆದಿರುವ ವಿಚಾರವನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. 1 ರಿಂದ 5 ನೇ ಆರೋಪಿತರು ನನ್ನ ಮಗ ಸುನೀಲ್ ಹಾಗೂ ಕಿರಣ್‌ಗೆ ದೊಣ್ಣೆಯಲ್ಲಿ ಹೊಡೆದಿರುವ ವಿಚಾರ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ.

4. 1 ನೇ ಆರೋಪಿ ಹಾಗೂ ವಿನಯ್ ರವರು ಜಾತಿ ನಿಂದನೆ ಮಾಡಿ ಬೈದಿರುತ್ತಾರೆ. ನನ್ನ ಮಗನನ್ನು ಹಗ್ಗದಿಂದ ಕಟ್ಟಿರುವುದನ್ನು ನೋಡಿದಾಗ ರಾತ್ರಿ 8.00 ಗಂಟೆಯಾಗಿರುತ್ತದೆ. ಯಾವ ಹಗ್ಗದಿಂದ ಕಟ್ಟಿರುವ ವಿಚಾರವನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ, ಸಾಕ್ಷಿ ನ್ಯಾಯಾಲಯದ ಮುಂದಿರುವ ಹಗ್ಗದಿಂದ ಎಂದು ನುಡಿಯುತ್ತಾರೆ. ಸದರಿ ಹಗ್ಗವನ್ನು ನಾನು ನ್ಯಾಯಾಲಯದಲ್ಲಿ ಮೊದಲನೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ,. ದೊಣ್ಣೆಗಳನ್ನು ಇದೇ ಮೊದಲನೆ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ.

5. ಘಟನೆಯಾದ ನಂತರ ಸರ್ಕಾರದಿಂದ ಹಣ ಪಡೆದಿರುತ್ತೇನೆ ಎಂದರೆ ಸರಿ. ಹಣ ಪಡೆಯುವ ದುರುದ್ದೇಶದಿಂದ ಆರೋಪಿಯವರು ಜಾತಿ ನಿಂದನೆ ಮಾಡಿದ್ದಾರೆ ಎಂದು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಜಾತಿ ನಿಂದನೆ ಮಾಡಿ ದೂರು ಕೊಟ್ಟಿರುವುದರಿಂದಲೇ ನನಗೆ ಹಣ ಬಂದಿದೆ ಎಂದರೆ

ಸರಿ. ನಾನು ಹೇಳಿದ ರೀತಿ ಆರೋಪಿಗಳು ನನಗೆ ಯಾವುದೇ ಗಲಾಟೆ ಮಾಡಿಲ್ಲ, ನಾನು ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಪ್ರ.,**

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ